# 10 ಸೀಟ್‌ಗಳ ಈ ಬೈಕ್..!



ಒಂದು ಬೈಕ್‌ನಲ್ಲಿ ಎಷ್ಟು ಜನ ಕುಳಿತುಕೊಳ್ಳಬಹುದು?

ಹೀಗೆಂದು ಕೇಳಿದರೆ ಇದೆಂಥ ಹುಚ್ಚು ಪ್ರಶ್ನೆ ಎಂದುಕೊಳ್ಳುತ್ತೀರಿ ಅಲ್ವಾ? ಅಬ್ಬಬ್ಬಾ ಎಂದರೆ ಮೂರು ಮಂದಿ ಅಥವಾ ಮಕ್ಕಳು ಇದ್ದರೆ ಕಷ್ಟಪಟ್ಟು ಮೂರು ಮಂದಿ ಜೊತೆಗೆ ಕಾಲ ಮೇಲೆ ಒಂದು ಮಗು ಎಂದರೆ ನಾಲ್ಕು ಮಂದಿ ಕುಳಿತುಕೊಳ್ಳಬಹುದು.

ಇಲ್ಲಿ ಹೇಳ ಹೊರಟಿದ್ದು 10 ಮಂದಿ ಕುಳಿತುಕೊಳ್ಳುವ ಬೈಕ್ ಬಗ್ಗೆ. ಅದೂ ದೊಡ್ಡವರು ಯಾವುದೇ ತೊಂದರೆ ಇಲ್ಲದೆಯೇ ಕುಳಿತು ಕೊಳ್ಳಬಹುದಾದ ಬೈಕ್ ಕುರಿತು! ಹಾಗೆಂದು ಇದು ಯಾವುದೇ ಸರ್ಕಸ್ ಕಂಪೆನಿಯ ಕುರಿತು ಹೇಳುತ್ತಿರುವ ಬೈಕ್ ಅಲ್ಲ. ಬದಲಿಗೆ ರಸ್ತೆಗೇ ಇಳಿದಿರುವ ಬೈಕ್. ಹೌದು. ಇಂಥಾದ್ದೊಂದು ಬೈಕ್ ಈಗ  ಜರ್ಮನಿ ಮಾರುಕಟ್ಟೆಗೆ ಲಗ್ಗೆ ಇಟ್ಟಿದೆ. ಇಲ್ಲಿಯ ಮಾರುಕಟ್ಟೆಗೆ ಬರುವ ದಿನ ದೂರವಿಲ್ಲ!

25 ಅಡಿ ಉದ್ದ ಇರುವ ಈ ಬೈಕ್ ಸುಮಾರು ಮೂರು ಸಾವಿರ ಪೌಂಡ್ ತೂಕ ಇದೆ. ಹತ್ತು ಜನರು ಕುಳಿತುಕೊಂಡರೆ ಈ ಬೈಕ್ ತೂಕ ಸರಿ ಸುಮಾರು 5 ಸಾವಿರ ಪೌಂಡ್! ಜರ್ಮನಿಯ ಪ್ರತಿಷ್ಠಿತ ಹರ್ಲಿ ಡೇವಿಡ್ಸನ್ ಕಂಪೆನಿ ಇದನ್ನು ತಯಾರಿಸಿದೆ. ಇಷ್ಟು ಉದ್ದದ ಬೈಕ್ ತಯಾರು ಮಾಡುವ ಸಾಹಸಕ್ಕೆ ಕೈ ಹಾಕಿರುವವರು ಹರ್ಲಿ ಡೇವಿಡ್ಸನ್ ಕಂಪೆನಿಯ ಬೈಕ್ ಡಿಸೈನರ್ ಡಾ.ಸ್ಟೀವ್ ಹಾಪ್‌ಕಿನ್ಸ್.

ಬೈಕ್ ವಿವರ ಇಂತಿದೆ;

25 ಅಡಿ ಉದ್ದದ ಈ ಬೈಕ್‌ನಲ್ಲಿ ಇರೋದು ನಾಲ್ಕು ಚಕ್ರ. ಹಿಂದೆ ಹಾಗೂ ಮುಂದೆ ತಲಾ ಎರಡೆರಡು ಚಕ್ರಗಳು ಇವೆ. ಇದರ ಜೊತೆ ಸಮತೋಲನ ಕಾಪಾಡುವ ಸಲುವಾಗಿ ಫ್ರಂಟ್ ಡಿಸ್ಕ್ ಹಾಗೂ ಶಕ್ತಿಯುತ ಟಯರ್‌ಗಳನ್ನು ಅಳವಡಿಸಲಾಗಿದೆ. ಮೂರು ಎಕ್ಸ್‌ಟ್ರಾ ಟಯರೂ ಕೂಡ ಈ ಬೈಕ್‌ನಲ್ಲಿ ಇದೆ. ಹತ್ತೂ ಜನ ಸವಾರರು ಹಿಡಿದುಕೊಳ್ಳಲು ಅನುಕೂಲ ಆಗುವಂತೆ ಹ್ಯಾಂಡಲ್ ಹ್ಯಾಂಡಲ್ ವ್ಯವಸ್ಥೆ ಇಲ್ಲಿದೆ. ದರ ಇನ್ನೂ ತಿಳಿದುಬಂದಿಲ್ಲ.

19ರ ದಶಕದ ಎಂಜಿನ್!

ಈ ಬೈಕ್ ಇನ್ನೊಂದು ವಿಶೇಷತೆ ಗೊತ್ತಾ? 1909ರಿಂದ 1929ರ ಇಸವಿಯ ನಡುವೆ ಹರ್ಲಿ ಡೇವಿಡ್ಸನ್ ಕಂಪೆನಿಯಿಂದ ತಯಾರಿಸಲ್ಪಟ್ಟ ಎಂಜಿನ್‌ಗಳನ್ನು ಈ 10 ಸೀಟುಗಳುಳ್ಳ ಬೈಕ್‌ಗೆ ಅಳವಡಿಸಲಾಗಿದೆ.

ಹೊಸ ಹೊಸ ಬೈಕ್‌ಗಳ ಹುಡುಕಾಟದಲ್ಲಿ ಇರುವ ಯುವ ಪೀಳಿಗೆಗೆ ಇದೊಂದು ಸಂತೋಷದ ವಿಷಯವೇ ಸರಿ. ಹಾಗೆಂದು ಬಹಳ ಸಂತಸ ಪಡಬೇಕಾದ ಅಗತ್ಯವಿಲ್ಲ. ಯಾಕೆಂದರೆ ಈ ಬೈಕ್ ದೂರದ ಪ್ರಯಾಣಕ್ಕೆ ಯೋಗ್ಯವಾದುದಲ್ಲ ಎನ್ನುತ್ತಾರೆ ಸ್ಟೀವ್ ಹಾಪ್‌ಕಿನ್ಸ್. 'ಇದರದಲ್ಲಿ ಏಳು ಎಂಜಿನ್‌ಗಳನ್ನು ಅಳವಡಿಸಿದ್ದರಿಂದ ಎಂಜಿನ್ ಬೇಗನೇ ಬಿಸಿಯಾಗುತ್ತದೆ. ಆದುದರಿಂದ ಬೈಕ್ ಬಹಳ ದೂರದ ಪ್ರಯಾಣಕ್ಕೆ ಯೋಗ್ಯವಾಗಿಲ್ಲ' ಎನ್ನುವುದು ಅವರ ಮಾತು.

ಬೈಕ್ ತುಂಬ ಉದ್ದವಾಗಿದ್ದರಿಂದ ಇದರ ಚಾಲನೆಗೆ ಒಟ್ಟು ಏಳು ಎಂಜಿನ್ ಗಳನ್ನು ಅಳವಡಿಸಲಾಗಿದೆ. ಆದುದರಿಂದ ನಗರ ಪ್ರದೇಶ ಹಾಗೂ ತಿರುವಿನಲ್ಲಿ ಚಾಲನೆ ಮಾತ್ರ ಸ್ವಲ್ಪ ಕಷ್ಟ ಎನ್ನುತ್ತಾರೆ ಅವರು. ಇವೆಲ್ಲ ತಮಗೆ ಮೊದಲೇ ಗೊತ್ತಿತ್ತು ಎನ್ನುವ ಅವರು, 'ಅದೇನಿದ್ದರೂ ಹೊಸದೊಂದು ಸಂಶೋಧನೆ ಮಾಡಿರುವ ಹೆಮ್ಮೆ ನನಗಿದೆ' ಎಂದು ಬೀಗುತ್ತಾರೆ.

■ ಸುಚೇತನಾ ನಾಯ್ಕ

